ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಸದಸ್ಯರೇ ಹೇಳಿದಂತೆ, ಅಂಗನವಾಡಿ ಕಾರ್ಯಕರ್ತೆಯರಿಗೆ ನಾವು ಕೊಡುತ್ತಿರುವಂಥ ಗೌರವ ಧನವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಕೂಡ ಕೂಡ ಭರಿಸುತ್ತಿವೆ. ಈಗಾಗಲೇ ನಾವು ರಾಜ್ಯ ಸರ್ಕಾರದಿಂದ ಯಾವುದೇ ತಡೆ ಇಲ್ಲದ ರೀತಿಯಲ್ಲಿ ನಾವೇನು 550 ರೂಪಾಯಿಗಳನ್ನು ಕೊಡುತ್ತೇವೆ ಅದನ್ನು ಈಗ ಕೊಡುತ್ತಿದ್ದೇವೆ. ಅದರಲ್ಲಿ ಯಾವುದೇ ತಡೆ ಆಗಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬಂದಿರಲಿಲ್ಲ. April ತಿಂಗಳು ಮತ್ತು May ತಿಂಗಳಿನಲ್ಲಿ ಹಣ 2 ಕಂತುಗಳಲ್ಲಿ ಬಂದಿದೆ. ಅದನ್ನು ನಾವು ಈಗಾಗಲೇ ವಿತರಿಸಿದ್ದೇವೆ. ಕಡ್ಡಾಯವಾಗಿ ವಿತರಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲುದಾರಿಕೆಯಲ್ಲಿ ನಡೆಯುವಂಥ ಈ ಯೋಜನೆ ಇದ್ದು, ಇದಕ್ಕೆ ರಾಜ್ಯ ಸರ್ಕಾರವಾದರೂ ಕೂಡ ಆ ನೌಕರರಿಗೆ ಕ್ಲುಪ್ತ ಸಮಯಕ್ಕೆ ಪ್ರತಿ ತಿಂಗಳೂ ಕೊಡುವಂಥ 1550 ರೂಪಾಯಿ ಕೊಡುವುದನ್ನು ನಾವೇಕೆ ಈ ರೀತಿಯಲ್ಲಿ ನಿರ್ಲಕ್ಷ್ಯ ಮಾಡುತ್ತಿದ್ದೇವೆ? ಏಕೆ ಕೊಡಲಿಕ್ಕಾಗುವುದಿಲ್ಲವೆಂಬ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ರಾಜ್ಯ ಸರ್ಕಾರದ ನಿರ್ಲಕ್ಷ್ಯದ ಪ್ರಶ್ನೆಯೇ ಇಲ್ಲ. ನಾವು 550 ರೂಪಾಯಿ ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ವಿಳಂಬವಾಗಿತ್ತು. ಈಗ ಬಂದಿದೆ. ವಿತರಿಸುತ್ತಿದ್ದೇವೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಅನೇಕ ಯೋಜನೆಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದ ಮೇಲೆಯೇ ಕಾರ್ಯಕ್ರಮವಾಗುವುದಲ್ಲ. ಕಾರ್ಯಕ್ರಮವಾಗುತ್ತದೆ. ನೌಕರರಿಗೆ ಸಂಬಳ ಪಾವತಿಯಾಗುತ್ತದೆ. ಕೇಂದ್ರ ಸರ್ಕಾರದಿಂದ ಮತ್ತೆ ಅದಕ್ಕೆ ಜಮೆಯಾಗುತ್ತದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರ ಸಲಹೆ-ಸೂಚನೆಯನ್ನು ಗಮನಿಸುತ್ತೇನೆ.

ಅಧ್ಯಕ್ಷರು: ಹೆಚ್.ಎಸ್. ಶಂಕರಲಿಂಗೇಗೌಡರು ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರು ಏನು ತಿಳಿದುಕೊಂಡಿದ್ದಾರೆಂದರೆ, ಅವರು ಮಂತ್ರಿ ಸ್ಥಾನ ಸಿಗಲಿಲ್ಲ ಎಂದು ಹೊರಟು ಹೋಗಿದ್ದಾರೆ ಸದನಕ್ಕೆ ಬರಲಿಲ್ಲವೆಂದು ತಿಳಿದುಕೊಂಡಿದ್ದಾರೆ.

ಮೈಸೂರು ನಗರಕ್ಕೆ ಹೊಸದಾಗಿ ಕುಡಿಯುವ ನೀರಿನ ಯೋಜನೆಗಳು

147 (670) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರಕ್ಕೆ ಹೊಸದಾಗಿ ಮಂಜೂರು ಮಾಡುವಂತೆ ಯಾವ ಯಾವ ಕುಡಿಯುವ ನೀರಿಗೆ ಯೋಜನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ;

ಆ) ಈ ಪ್ರಸ್ತಾವನೆ ಸಲ್ಲಿಸಿದ್ದು ಯಾವಾಗ; ಈ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ (ಈ ಪ್ರಸ್ತಾವನೆಗಳ ಯೋಜನಾ ವೆಚ್ಚದ ಸಂಪೂರ್ಣ ವಿವರ ನೀಡುವುದು);

ಇ) ಈ ಪ್ರಸ್ತಾವನೆಗಳಿಗೆ ಸರ್ಕಾರ ಅನುಮತಿ ನೀಡುವುದು ಯಾವಾಗ; ಈ ಯೋಜನೆಗಳು ಅನುಷ್ಠಾನಗೊಂಡಲ್ಲಿ ಮೈಸೂರು ನಗರಕ್ಕೆ ಎಷ್ಟು ಎಂ.ಜಿ.ಡಿ. ನೀರು ದೊರಕುವುದು;

ಈ) ಮೈಸೂರು ನಗರದ ಯಾವ ಯಾವ ಪ್ರದೇಶಗಳು ಈ ಯೋಜನೆಯ ಲಾಭ ಪಡೆಯುವುವು (ಸಂಪೂರ್ಣ ವಿವರ ನೀಡುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು):

ಅ. ಹೊಸದಾಗಿ ಯಾವುದೆ ಪ್ರಸ್ತಾವನೆ ಸಲ್ಲಿಸಿಲ್ಲ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ ಈ ಅಧಿಕಾರಿಗಳೇನು ಮಾಡುತ್ತಿದ್ದಾರೆ? ವಸ್ತುಸ್ಥಿತಿ ಕೊಟ್ಟಿದ್ದೀರಾ? ಮೈಸೂರಿನಲ್ಲೂ ಮೂರು ದಿವಸಕ್ಕೆ ಒಂದು ಸಾರಿ ನೀರು ಬರುತ್ತಿದೆ. ಕೊಡತಕ್ಕಂಥ ಹಾರಿಕೆಯ ಉತ್ತರವಿದು. ತಾವು ಕೂಡ ಮೈಸೂರಿನಲ್ಲೇ ಇದ್ದೀರಿ. ರಾತ್ರಿ 12, 1 ಗಂಟೆಗೆ ನೀರು ಕೊಡುವುದು ಆಗುತ್ತಿದೆ. ಎಂಥ ವಿಚಿತ್ರವಾಗಿದೆ ಎಂದರೆ, ಒಂದು ಹೊಸದಾಗಿ ಯೋಜನೆ ಮಾಡಿ ಮೇಳಾಪುರ ಯೋಜನೆ ಮಾಡಿ ಎಂದು ನಾನು ಹೇಳಿದ್ದೇನೆ. ಮಾಡಿಲ್ಲ. ಹಳೆಯ ಕಾಲದ motor ಗಳು, ಒಬೀರಾಯನ ಕಾಲದ motor ಗಳು. ಇಂಥ ಪರಿಸ್ಥಿತಿಯಲ್ಲಿ ಮೈಸೂರು ನಗರದಲ್ಲಿ ನೀರಿಗೆ ಹಾಹಾಕಾರವಿದೆ. ಅದಕ್ಕೆ ಉತ್ತರವನ್ನು ಕೊಡಲಿ.

ಶ್ರೀ ಎಂ. ಪಿ. ಪ್ರಕಾಶ್ (ಗೃಹ, ಕಾನೂನು ಸಂಸದೀಯ ವ್ಯವಹಾರ ಸಚಿವರು) ಮಾನ್ಯ ಶಂಕರಲಿಂಗೇಗೌಡರು ಹೇಳಿದಂಥದ್ದಕ್ಕೆ ಹೊಸ ವಿಷಯಗಳ ಬಗ್ಗೆ ತಾಂತ್ರಿಕವಾಗಿ ಉತ್ತರ ಇಲ್ಲಿ ಬಂದಿದೆ. ಆದರೆ, ಅವರ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಮೈಸೂರು ನಗರಕ್ಕೆ ಹೊಸದಾಗಿ ಮಂಜೂರು ಮಾಡುವಂತೆ ಯಾವ್ಯಾವ ಕುಡಿಯುವ ನೀರಿನ ಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅವರು ಕೇಳಿದ್ದಾರೆ. ಅದಕ್ಕೆ, ಆಂತರಿಕವಾಗಿ ಹೊಸದಾದಂಥ ಯಾವುದೇ ಯೋಜನೆ ಪ್ರಸ್ತಾವನೆಯನ್ನು ಸಲ್ಲಿಸಿಲ್ಲ ಎಂಬ ಉತ್ತರ ಬಂದಿದೆ. ಆದ್ದರಿಂದ, ಉಳಿದ ಎಲ್ಲ ಪ್ರಶ್ನೆಗಳಿಗೂ ಕೂಡ ಉದ್ಭವಿಸುವುದಿಲ್ಲ ಅನ್ನತಕ್ಕಂಥದ್ದಾಗಿದೆ. ಆದರೆ, ಅವರು ಹೇಳಿದಂತೆ, ಮೇಳಾಪುರ ಯೋಜನೆಯಾಗಲಿ, ಬೆಳಗೊಳದ ಯೋಜನೆಯಾಗಲಿ, ಜವಹರಲಾಲ್ ನೆಹರೂ ರಾಷ್ಟ್ರೀಯ ನಗರ ಪುನರುಜ್ಜೀವನ ಯೋಜನೆಯಡಿಯಲ್ಲಿ ತೆಗೆದುಕೊಂಡಿರತಕ್ಕಂಥದ್ದು ಇದೆ. ಈಗಾಗಲೇ ಮೈಸೂರು ನಗರದಲ್ಲಿ ತಲಾ 120 ಲೀಟರ್ ಕೊಡಬೇಕೆಂಬುದರ ಪ್ರಕಾರ ನೀರನ್ನು ಒದಗಿಸಲಾಗುತ್ತಿರತಕ್ಕಂಥದ್ದು ಇದೆ. ಅದನ್ನು 135 ಲೀಟರ್‌ಗೆ ಹೆಚ್ಚಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಅದಕ್ಕೆ ಬೆಳಗೊಳ ಮತ್ತು ಹೊಂಗಳ್ಳಿ ನೀರು ಸರಬರಾಜು ಯೋಜನೆಗಳಿಗಾಗಿ 549 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಈಗ ಯಂತ್ರೋಪಕರಣಗಳನ್ನು ಹಳೆಯ ಮತ್ತು ಒಬೀರಾಯನ ಕಾಲದ ಯಂತ್ರೋಪಕರಣಗಳು ಏನಿದ್ದವು ಅವನ್ನೆಲ್ಲ ಬದಲಾಯಿಸಿ ಈಗ ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈಗ 549 ಲಕ್ಷ ರೂಪಾಯಿಗಳ ಖರೀದಿಯನ್ನು ಮಾಡಲಾಗಿದೆ. ಹಾಗೆಯೇ, ಮೇಳಾಪುರ ಯೋಜನೆಯ 2ನೇ ಹಂತದಲ್ಲಿ 11 MCD ನೀರು ಪಡೆಯಲು 12.60 ಕೋಟಿ ರೂಪಾಯಿಗಳ ಅಂದಾಜಿಗೆ ಈಗಾಗಲೇ

ಸರ್ಕಾರ ಅನುಮೋದನೆಯನ್ನು ನೀಡಿದೆ. 2007ರಲ್ಲಿ ಕಾರ್ಯಗತಗೊಳಿಸತಕ್ಕಂಥದ್ದು ಈಗ ಉಳಿದಿರತಕ್ಕಂಥ ಉದ್ದೇಶ. ಕೆಲಸ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರದ ಜವಹರಲಾಲ್ ನೆಹರೂ ರಾಷ್ಟ್ರೀಯ ನಗರ ಪುನರುಜ್ಜೀವನ ಯೋಜನೆಯಡಿಯಲ್ಲಿ ಮೈಸೂರು ನಗರಕ್ಕೆ ಮುಂದಿನ 25 ವರ್ಷಗಳಿಗೆ ಬೇಕಾಗುವಂಥ ಮೂಲಭೂತ ಸೌಕರ್ಯಗಳ ಬಗ್ಗೆ ನಗರಾಭಿವೃದ್ಧಿ ಯೋಜನೆ (CDP) ಯನ್ನು ತಯಾರಿಸಲಾಗಿದೆ. ಆದರ ಕೆಳಗೆ ಯೋಜನೆಯ ವಿವರವಾಗಿರುವಂಥ (DPR) ಅನ್ನು ತಯಾರು ಮಾಡಿರತಕ್ಕಂಥದ್ದು ಇದೆ. ಮೈಸೂರು ನಗರ ತೀವ್ರ ಬೆಳವಣಿಗೆ ಹೊಂದುತ್ತಿರುವ ಹಿನ್ನೆಲೆಯಲ್ಲಿ 25 ವರ್ಷಗಳಲ್ಲಿ ಉಂಟಾಗಿರುವ ನೀರಿನ ಬೇಡಿಕೆಯನ್ನು ಪೂರೈಸಲು ಹಾಗೂ ನಗರದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಬರುತ್ತಿರುವ ಹೊಸ ಬಡಾವಣೆಗಳಾದ ಶ್ರೀರಾಮಪುರಂ 1, 2 ಮತ್ತು 3ನೇ ಹಂತ, ವಿವೇಕಾನಂದ ನಗರ, ಕುವೆಂಪು ನಗರ, ಬೋಗಾದಿ, ವಿಜಯನಗರ 3 ಮತ್ತು 4ನೇ ಹಂತ, ಜೆ.ಪಿ. ನಗರ, ನಾಚೇನಹಳ್ಳಿ, ರಮಾಬಾಯಿ ನಗರ, ಗೊರೂರು ಆಶ್ರಯ ಬಡಾವಣೆ ಇವುಗಳಿಗೆಲ್ಲಾ 90 ಕೋಟಿ ರೂಪಾಯಿಗಳ ವಿವರವಾದಂಥ ಇಂಥ ಯೋಜನೆಯನ್ನು ಈಗಾಗಲೇ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ. ಆ ಒಂದು ಪ್ರಸ್ತಾವನೆ ಬಹಳ ತೀವ್ರವಾದಂಥ ಗಮನದಲ್ಲಿ ಮತ್ತು ಪರಿಶೀಲನೆಯಲ್ಲಿದೆ. ಮೈಸೂರು ನಗರಕ್ಕೆ ಮುಂದಿನ 50 ವರ್ಷಗಳಿಗೆ ಕಾವೇರಿ ನೀರು ಸರಬರಾಜು ಒದಗಿಸುವಂಥ ವಿಚಾರದಲ್ಲಿಯೂ ಕೂಡ ಒಂದು ಯೋಜನೆಯನ್ನು ತಯಾರು ಮಾಡಿದ್ದು, ಈ ಯೋಜನೆಯ ವಿವರ ಬಗ್ಗೆ ಹೇಳುವುದಾದರೆ ಈ ಯೋಜನೆಗೆ 97.27 ಕೋಟಿ ರೂಪಾಯಿಗಳಿಗೆ ಅಂದಾಜನ್ನು ತಯಾರಿಸಿದ್ದು, ಅನುಮೋದನೆಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ ಅದು ಅಲ್ಲಿಂದ ಬಂದ ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕಾವೇರಿ ನದಿ ಮೈಸೂರಿಗೆ ಹತ್ತಿರವಿದ್ದರೂ ಕೂಡ ಬೆಂಗಳೂರಿಗೆ ನೀರು ಸರಬರಾಜು ಮಾಡಲಾಗುತ್ತದೆ. ಆದರೆ, ಈಗ ಕೊಟ್ಟಿರತಕ್ಕಂಥ ಮಾಹಿತಿ ಹಾದಿ ತಪ್ಪಿಸುವಂಥದ್ದು ಮತ್ತೆ ಇದು ನಿಜವಾಗಿಯೂ ಕೂಡ ಸುಳ್ಳು ಮಾಹಿತಿ. ಈ ರೀತಿಯಾಗಿ ಮಾಡಬಾರದು. ಬಸವಣ್ಣನವರು ಒಂದು ಮಾತು ಹೇಳುತ್ತಾರೆ. ಅದೇನೆಂದರೆ,

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿರ್ದೊಡೆ
ಕೂಡಲಸಂಗಮದೇವನೆಂತೊಲಿವನಯ್ಯಾ

ಇದಕ್ಕೆ ಒಬ್ಬರೂ ಕೂಡ ಬದ್ದರಾಗಿಲ್ಲ. ಇವತ್ತಿನದಿವಸ ಅಧಿಕಾರಿಗಳು ಏಷಾರಾಮಿ ಜೀವನ ನಡೆಸುತ್ತಿದ್ದಾರೆ. ಈಗ ಕೊಟ್ಟಿರುವ ಮಾಹಿತಿಗಳೆಲ್ಲಾ ತಪ್ಪು ಮತ್ತೆ ಸುಳ್ಳು ಮಾಹಿತಿ. ನಾನು ಆಡಳಿತ ಪಕ್ಷದಲ್ಲಿರುವುದರಿಂದ ನಾನು ಸದನದ ಬಾವಿಗೆ ಬರುತ್ತಿಲ್ಲ. ಆದರೂ ಕೂಡ ಈ ಉತ್ತರವನ್ನು ಬಹಿಷ್ಕರಿಸಿ ಸದನದ ಹೊರಕ್ಕೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಶಂಕರಲಿಂಗೇಗೌಡರವರು ಸಭಾತ್ಯಾಗ ಮಾಡಿ ಸದನದಿಂದ ಹೊರಗೆ ಹೋದರು)

ಕೆ.ಜಿ.ಎಫ್. ನಗರದಲ್ಲಿ ಒಳಚರಂಡಿ ವ್ಯವಸ್ಥೆ

149 (671) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೇ?

1. ಕೆ.ಜಿ.ಎಫ್. ನಗರವನ್ನು ಒಳಚರಂಡಿ ವ್ಯವಸ್ಥೆಗೆ ಒಳಪಡಿಸಲಾಗಿದೆಯೇ;

2. ಒಳಪಡಿಸದಿರಲು ಕಾರಣಗಳೇನು;

3. ಈ ನಗರವನ್ನು ಯು.ಜಿ.ಡಿ.ಗೆ ಒದಗಿಸಲು ಬೇಕಾಗಿರುವ ಹಣವೆಷ್ಟು; ಯಾವಾಗ ಒದಗಿಸಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):

1. ಇಲ್ಲ.

2. ಈ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ಸರ್ವೆ ಅಂದಾಜು ಪಟ್ಟಿಯನ್ನು 9 ಲಕ್ಷ ರೂ.ಗಳಿಗೆ ತಯಾರಿಸಿ ಕೆ.ಜಿ.ಎಫ್ ನಗರ ಸಭೆಯವರಿಗೆ ದಿನಾಂಕ 29.12.2004ರಂದು ಕಳುಹಿಸಿದ್ದು, ಅವರು ಸದರಿ ಅಂದಾಜು ಮೊತ್ತವನ್ನು ಭರಿಸಿದ ಕೂಡಲೇ ಸರ್ವೆ ಕಾರ್ಯ ಕೈಗೊಂಡು ಒಳಚರಂಡಿ ಯೋಜನೆಯನ್ನು ರೂಪಿಸಲಾಗುವುದು.

3. ಸರ್ವೆ ಕಾರ್ಯ ಕೈಗೊಂಡು ಒಳಚರಂಡಿ ಯೋಜನೆಯನ್ನು ಅಂದಾಜು ತಯಾರಿಸಿದ ನಂತರ ಯು.ಜಿ.ಡಿ. ಅಂದಾಜು ವೆಚ್ಚ ತಿಳಿದುರುತ್ತದೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ``Reply by Hon`ble Chief Minister'' ಎಂದು ಕೊಟ್ಟಿದ್ದಾರೆ. ಆದ್ದರಿಂದ, ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಲ್ಲವೇ? ಅವರು ಇಲ್ಲಿರುವುದರಿಂದ ಅವರೇ ಉತ್ತರ ಕೊಡಬೇಕು. ಆದರೆ, ಅದನ್ನು ನೋಡಿಲ್ಲ. ಈ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿದ್ದು, ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇರುವುದರಿಂದ ಈ ಪ್ರಶ್ನೆಗೆ ``Reply by Hon`ble Deputy Chief Minister''—ಎಂದು ಗಂಭೀರವಾಗಿ ಕೊಟ್ಟಿದ್ದಾರೆ. But where is he ಮಾನ್ಯ ಪ್ರಕಾಶ್‌ರವರು ಬಹಳ ಇಂಟಲಿಜೆಂಟ್ ಆಗಿ ಉತ್ತರ ಕೊಡುತ್ತೀರೆಂದು ನಮಗೆ ಗೊತ್ತಿದೆ. ಎಷ್ಟು ಪ್ರಶ್ನೆಗಳು ಇದ್ದರೂ ಕೂಡ ಉತ್ತರ ಕೊಡುತ್ತೀರಿ. You are a very intelligent person. I am getting answers from him definitely, I am